ಬಿಸಿಕಾಫಿಗೆ ಸಕ್ಕರೆ ಬೆರೆಸಿ ಕಡ್ಡಿಯಿಂದ ಕರಗಿಸುತ್ತಾ ತನ್ಮಯವಾಗಿ ಕಾಫಿ ಕುಡಿಯುತ್ತಿದ್ದವಳನ್ನು ತದೇಕವಾಗಿ ನೋಡಿದೆ. 26ರ ಆಸುಪಾಸಿನ ತುಸು ತೆಳ್ಳಗಿನ ದೇಹ ಪ್ರಕೃತಿಯ ಆ ಹುಡುಗಿಯ ಮೂಲವೂ ನನ್ನ ದೇಶವಾದ ಭಾರತವೇ. ನಾನು ದೆಹಲಿಯಿಂದ ಬಂದವನಾದರೆ ಅವಳು ದಕ್ಷಿಣ ಕರ್ನಾಟಕದ ಹುಡುಗಿ. ನಾನು ಕಾಫಿ ಕುಡಿಯುವುದನ್ನು ಬಿಟ್ಟು ಅವಳಲ್ಲೇ ದೃಷ್ಟಿನೆಟ್ಟಾಗ 'ವೈ ಡೋಂಟ್ ಯೂ ಡ್ರಿಂಕ್ ಕೋಫಿ?' ಎಂದಳು.

'ಯ್ಯು' ಎನ್ನುತ್ತಾ ನನ್ನ ಲೋಟೆಯನ್ನು ಎತ್ತಿ ತುಟಿಗಿಟ್ಟುಕೊಂಡೆ. ಮಾತು ಶುರುಮಾಡಲು ಸಮಯ ಪ್ರಶಸ್ತವಾಗಿತ್ತು. 'ನಿನಗೆ ಒಬ್ಬಳೇ ಈ ದೂರದ ದೇಶದಲ್ಲಿ ಒಂದೇ ಬಗೆಯ ಕೆಲಸ ಮಾಡಿ ಬದುಕು ಮೊನಾಟಮಸ್ ಅನ್ನಿಸೋಲ್ಲವೆ?' ಎಂದೆ.

'ಊಂ... ಹಾಗೇನೂ ಅನ್ನಿಸಲ್ಲ. ಆ್ಯಕ್ಚುಯಲಿ ನಾನು ನನ್ನ ರಿಸರ್ಚ್‌ನ ತುಂಬಾ ಎಂಜಾಯ್ ಮಾಡ್ತಿದ್ದೀನಿ' ಎಂದಳು. 'ಹೇ ಬೇಬಿ. ಡೋಂಟ್ ಸೇ ದಿಸ್ ಟು ಮಿ, ಐ ಎಮ್ ಎ ಪೋಸ್ಟ್‌ಡಾಕ್' ಎಂದೆ ನಗುತ್ತಾ.

'ಐ ನೋ ನೀನು ಪೋಸ್ಟ್‌ಡಾಕ್ ಆದ್ರೆ ನಾನು ನನ್ನ ರಿಸರ್ಚ್‌ನ ಆನಂದಿಸುವಂತಿಲ್ಲವಾ?' ಎಂದಳು ನಗುತ್ತಾ. ಪರವಾಗಿಲ್ಲ ಹುಡುಗಿ ಮಾತಿಗೆ ಎದಿರೇಟು ಕೊಡುವ ಜಾಣೆ. ಅವಳು ನಕ್ಕಾಗ ಅವಳ ಗಲ್ಲದಲ್ಲಿ ಕಂಡೂ ಕಾಣದಂತೆ ಬಿದ್ದ ಕುಳಿಯೊಳಗೆ ನಾನಾಗಲೇ ಬಿದ್ದಾಗಿತ್ತು!

'ಏ ನಾನು ಹಾಗಲ್ಲ ಹೇಳ್ತಿರೋದು ಈ ರಿಸರ್ಚು ಸ್ಟಡೀಸ್... ಎಲ್ಲದರ ನಡುವೆ ನಮ್ಮದೊಂದು ಪರ್ಸನಲ್ ಲೈಫ್ ಬೇಕನ್ನಿಸೋಲ್ಲವಾ?' ಎಂದೆ. ತುಸು ನಾಚುತ್ತಾ 'ಅನ್ನಿಸುತ್ತೆ ಆದ್ರೆ... ದೇಶ ಬಿಟ್ಟು ಬಂದಿರೋ ನಮಗೆ ಸರಿಯಾದ ಜೊತೆಗಾರರು ಸಿಗಬೇಕಲ್ಲ' ಎಂದಳು ತಡೆ ತಡೆದು ನನ್ನನ್ನೇ ನೋಡುತ್ತಾ. ನನ್ನ ಪ್ಲಾನು ವರ್ಕ್ ಔಟ್ ಆಗುತ್ತಿದೆ ಎನಿಸಿತು.

'ಸಿಗ್ತಾರಪ್ಪಾ... ಸ್ವಲ್ಪ ಅಕ್ಕಪಕ್ಕ ಮುಂದೆ ಹಿಂದೆ ನೋಡಿದ್ರೆ' ಎಂದೆ ನನ್ನ ಎಡಗೈಯನ್ನು ಎದೆಯ ಮೇಲೆ ಇಟ್ಟುಕೊಳ್ಳುತ್ತಾ. ತುಸು ಸಂಭ್ರಮದಿಂದ 'ಯೂ ಮೀನ್ ಇಟ್' ಎಂದಳು.

'ಹೌದು ನಾನು ತುಂಬಾ ದಿನಗಳಿಂದ ನಿನ್ನನ್ನು ಕೇಳ್ಬೇಕಂತಿದ್ದೆ. ಆದ್ರೆ... ನೀನು ಯಾವ ಟೈಪ್ ಹುಡುಗಿ ಅಂತ ಗೊತ್ತಾಗ್ಲಿಲ್ಲ' ಎಂದೆ. 'ಯಾವ ಟೈಪ್ ಅಂದ್ರೆ ಏನರ್ಥ?' ಎಂದಳು ಮುನಿದುಕೊಳ್ಳುತ್ತಾ.

'ಅಂದ್ರೆ... ನಿಂಗೆ ಸೆಕ್ಸ್ ಓಕೇನಾ ವಿತೌಟ್ ಎನಿ ಕಮಿಟ್‌ಮೆಂಟ್' ಎಂದೆ ತುಸು ಧೈರ್ಯ ಒಗ್ಗೂಡಿಸಿ. ನೆಲಕ್ಕಪ್ಪಳಿಸಿದ ಚೆಂಡೊಂದು ರಿವ್ವನೆ ಪುಟಿದೇಳುವಂತೆ ಕೈಯಲ್ಲಿದ್ದ ಕಾಫಿ ಕಪ್ಪನ್ನು ಅಲ್ಲೇ ಇಟ್ಟು ಎದ್ದು ನಿಂತಳು. ಅವಳ ಮುಖ ಕೋಪದಿಂದ ಕೆಂಪಾಗಿತ್ತು. ಮೈ ಅದುರುತ್ತಿತ್ತು.

'ವಾಟ್ ಡೂ ಯೂ ಮೀನ್? ನಾನು ನಿನ್ನನ್ನು ಎಷ್ಟು ಅಡೋರ್ ಮಾಡ್ತಿದೀನಿ ನಿಂಗೊತ್ತಾ? ಒಂದೇ ಮಾತಲ್ಲಿ ನಿನ್ನ ಮೇಲಿನ ನನ್ನ ಪ್ರೀತೀನ ಹಾಳು ಮಾಡಿಬಿಟ್ಟೆ. ನಾನು ನಿನ್ನ ಇಷ್ಟಪಟ್ಟೆ, ಪ್ರೀತಿಸಿದೆ, ನನ್ನೊಳಗೊಳಗೆ... ನಿಂಗೆ ಹೇಳೊಕೆ ಕೂಡ ನಂಗೆ ಹೆದರಿಕೆ ಇತ್ತು. ಅಕಸ್ಮಾತ್ ಎಲ್ಲಾ ಸರಿ ಹೋದ್ರೆ ನಿನ್ನೆ ಮದ್ವೆ ಮಾಡ್ಕೋಬೇಕು ಅಂತಿದ್ದೆ. ನೀನು ನೋಡಿದ್ರೆ... ಮ್ಯಾರೇಜಿನ ಮಾತೇ ಇಲ್ದೆ ಸೆಕ್ಸ್ ವಿಷ್ಯ ಆಡ್ತಿದೀಯ. ನೋ ವೇ... ನೋ ಚಾನ್ಸ್... ನೀನು ಅದಕ್ಕೇನಾ ಕೇಳಿದ್ದು, ನಾನು ಯಾವ ಟೈಪ್ ಹುಡುಗಿ ಅಂತಾ! ಹಾಗಾರೆ ಕೇಳಿಸ್ಕೋ ನನಗೆ ಪ್ರೀತಿ, ಪ್ರೇಮ, ಕಾಮ, ಮದುವೆ... ಎಲ್ಲಾ ಒಂದೇ. ನಂಗದು ಯಾವತ್ತೂ ಬೇರೆ ಬೇರೆಯಲ್ಲ. ಯೂ ಹ್ಯಾವ್ ರುಯಿನ್ಡ್ ಮೈ ಡ್ರೀಮ್ಸ್ ಗೆಟ್ ಲಾಸ್ಟ್' ಎನ್ನುತ್ತಾ ತನ್ನ ಚೀಲಗಳನ್ನೆತ್ತಿಕೊಂಡು ಟಕಟಕನೆ ನಡೆಯತೊಡಗಿದಳು. ಅವಳು ಮಾತುಗಳ ಕಡೆಯಲ್ಲಿ ಗದ್ಗದಳಾಗಿದ್ದು ತಿಳಿದು ನನಗೂ ಕೆಟ್ಟೆನಿಸಿತು. ಇಷ್ಟಕ್ಕೂ ನಾನು